Doc-470
T-P-2

Reg No B C 155 27 — 4 —72

55th Year of Publication ‘Satyavadi Daily, Mysore 4

In the State — The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ವ್ಯಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪು.ಗ

ಎತ್ತು ಸಾವಿರ ಇಸವಿಯಲ್ಲಿ ಪ್ರಪಂಚದ ಪ್ರಳಯ

ಕುಟುಂಬ ಯೋಜನೆಗಾಗಿ ಆದರೂ ಪಶುವಧೆ ಪ್ರತಿಬಂಧಿಸಲ್ಪಡಲಿ

[ಎಂ ಶಿವಶಂಕರ್, ಮದ್ರಾಸು]

ಇಂದು ಕುಟುಂಬ ಯೋಜನೆಯ ಹೆಸರಿನಲ್ಲಿ ಬಡ ಬೋರೆಗೌಡನ ಬೊಕ್ಕ ಸದಿಂದಲಕ್ಷ್ಮೀಪಲಕ್ಷ್ಮ ರೂಪಾಯಿ ಬಾರೀ ಹೊಂಡದಲ್ಲಿ ಬೀಳುತ್ತಿದೆ, ಕಾಮುಕೇಳಿಗಾಗಿ ಉಪಯೋಗಿಸಲ್ಪಡುತ್ತಿದೆ. ಅವಕ್ಕೆ ಬೇಕಾಗುವ ವಸ್ತುಸಾಧನೆಗಳನ್ನೀಗ ನಮ್ಮ ದೇಶದಲ್ಲೇ ತಯಾರಿಸಲಾಗುತ್ತಿದೆಯಾದರೂ ಹೇರಳವಾಗಿ ಹೊರದೇಶಗಳಿಂದಲೇ ಬರಬೇಕಾಗಿದೆ. ಅವಕ್ಕೆಕ್ಕಾಗಿ ಅನ್ಯ ರಾಷ್ಟ್ರಗಳಿಗೆ ಆದಷ್ಟನ್ನು ನಾವು ತೆಗೆದಿಡಲೇ ಬೇಕು. ಹೀಗೆ ಅತ್ತ ಸರಕಾರಿ ಬೊಕ್ಕಸದ ಹಣ ಹಾಳು ಇತ್ತ ಕಾಮುಕರ ಸಂಖ್ಯೆ ಅಭಿವೃದ್ಧಿಯಾಗುತ್ತಿದ್ದು, ಭಾವಿ ಜನಾಂಗ ಅಂತಹವರ ಸಂತಾನವೇ ಇದ್ದು, ಆರತಿಗಾಗಿ ಬಿಗುವ ಬದಲು ಆ ರತಿಗಾಗಿ ಬಿಗುತ್ತಿದ್ದಾರೆ.

ಇದನ್ನು ತಡೆಯಲು ಸುಲಭೋಪಾಯವಿದೆ – ಜನರಲ್ಲಿ ಧಾರ್ಮಿಕ ಭಾವನೆ ಜಾಗೃತಿಯಾಗುವಂತೆ ಪ್ರಚಾರ ಮಾಡುವುದು ; ಆದರಲ್ಲಿ ಗೋಭಕ್ತಿಯೂ ಅಡಗಿರುತ್ತದೆ ; ಗೋವು ಕೇವಲ ಚುನಾವಣಾ ಲಾಂಛನವಾಗಿದ್ದರೆ ಸಾಲದು ; ನೈಜರಾಷ್ಟ್ರದ ಗೌರವ ಬಿಂದುವಾಗಿರಬೇಕು ; ಅಂದರೆ ಅವರ ಕೊಲೆ ಸಹನಾತೀತವಾಗಬೇಕು ; ಇದರಿಂದ ನಮ್ಮ ನೈತಿಕ ಮಟ್ಟ ಉತ್ಕರ್ಷ ನೆಲೆಗೆ ಬರುತ್ತದೆ.

ಅಷ್ಟೇ ಅಲ್ಲ ; ದನದ ಹಾಲನ್ನು ಉಪಯೋಗಿಸುವದರಿಂದ ರೋಗ ದೂರವಾಗುತ್ತದೆ : ಪ್ರಜೆಗಳು ಬಲಶಾಲಿಗಳಾಗಿದ್ದು ಸೌಮ್ಯಗುಣದವರೂ ಶಾಂತಸ್ವಭಾವದವರೂ ಆಗುತ್ತಾರೆ ; ಜನರಲ್ಲಿ ಕಾಮುಕ ಭಾವನೆ ಕಮ್ಮಿಯಾಗುತ್ತದೆ ; ಇನ್ನು ಹಳೆಯ ತುಪ್ಪ ಉಪಯೋಗಿಸಿದಲ್ಲಿ ಸಂತಾನಾಭಿವೃದ್ಧಿ ಮಿತಿ ತಪ್ಪಿ ಹೋಗುವುದಿಲ್ಲ ; ಹೇರಳವಾಗಿ ತುಪ್ಪ ಮಾರುಕಟ್ಟೆಯಲ್ಲಿದ್ದರೆ ಮಾತ್ರ ಹಳೆಯ ತುಪ್ಪ ಉಳಿಯಲೂ ಸಾಧ್ಯವಾಗುತ್ತದೆ ; ಹಿಂಗೆ ಬೇಕಾದಷ್ಟು ಹಾಲೂ, ತುಪ್ಪ ಸಿಗಬೇಕಾದರೆ, ಪಶುವಧೆ ಪ್ರತಿಬಂಧಿಸಲ್ಪಡಲೇ ಬೇಕು : ಇಲ್ಲವಿದ್ದಲ್ಲಿ ನಿಷ್ಪ್ರಯೋಜನದ ಹೆಸರಿನಲ್ಲಿ ಉತ್ತಮ ತಳಿಯ ಹಸುಗಳೂ ಕೊಲ್ಲಲ್ಪಡುತ್ತವೆ.

ಕುಟುಂಬ ಯೋಜನೆಗೆ ಪೋಲಾಗುವ ಹಣವನ್ನು ಗೋರಕ್ಷಣೆಗಾಗಿ ಉಪಯೋಗಿಸಿದಲ್ಲಿ ದೇಶ ಪ್ರಗತಿಯಾಗುತ್ತದೆ.

○

ಗೋಹತ್ಯೆ ಪೂರ್ಣ ನಿಶೇಧಕ್ಕೆ ಪರಿಶೀಲನೆ

ಗೋವಧೆಯನ್ನು ಸಂಪೂರ್ಣವಾಗಿ ನಿಶೇಧಿಸಿ ಎನ ಶಾಸನವನ್ನು ತರಲು ಸಂವಿಧಾನವನ್ನು ತಿದ್ದುವ ವಿಷಯವನ್ನು ನೇಮಕಗೊಂಡ ಗೋಸಂತತಿ ರಕ್ಷಕ ಸಮಿತಿಯು ಪರಿಶೀಲಿಸುತಿದೆಯೆಂದೂ ಆದರೆ ಹಾಲು ಕೊಡುವ ಪ್ರಾಣಿಗಳಾದ ಎಮ್ಮೆ ಮೊದಲಾದವುಗಳ ವಧೆಯನ್ನು ನಿಶೇಧಿಸುವ ಶಾಸನವನ್ನು ತರುವ ಉದ್ದೇಶ ಸರಕಾರಕ್ಕಿಲ್ಲವೆಂದೂ ಈಚೆಗೆ ನವದೆಹಲಿಯಲ್ಲಿ ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕಲ್ಕತ್ತಾ ವಾರ್ತೆಯಂತೆ, ಗಜಾತಿನ200 ಗ್ರಾನುಗಳಲ್ಲಿ ಮತ್ತು ರಾಜಸ್ಥಾನ 70 ಗ್ರಾನುಗಳಲ್ಲಿ ಪ್ರಾಣಿಗಣತಿಯಂತೆಒಟ್ಟು 1.88 ಮಿಲಿಯ ನವಿಲುಗಳಿವೆ.

ಔದಾರ್ಯ

ಕಚ್ಚಿನ ಮಾಜೀ ರಾಜ ಶ್ರೀ ನುದನ ಸಿಂಹಜೀ ತನ್ನ ಐತಿಹಾಸಿಕ ಪಿತ್ರಾರ್ಜಿತ ಆಸ್ತಿ “ಪ್ರಾಗ್ಮಹಾಲಯ” ವನ್ನು ಕಚ್ ಜನರ ಕಲ್ಯಾಣಕ್ಕಾಗಿ ಉದಾರ ದಾನ ಮಾಡಲು ನಿರ್ಧರಿಸಿರುವರು ಇವರು ತನುಗೆ ಹೊರೆಯುತ್ತಿದ್ದ ರಾಜಧನವಲ್ಲಿ ವರ್ಷಕ್ಕೆ ಅರ್ಧಲಕ್ಷ ರೂ ದಾನ ಮಾಡುತ್ತಿದ್ದರು. ರಾಜಧನ ನಿಂತ ಮೇಲೆ ಇದು ನಿಂತಿತು.

★

ಸಮಿತಿ ತೀರ್ಮಾನ

ತಿರುಪತಿಯ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯದ ಬಂಗಾರದ ಬಾಗಿಲುವರೆಗೆ ಹಿಂದೂಗಳಲ್ಲದವರು ದೇವಾಲಯದ ಅಧಿಕಾರಿಗಳ ಅಪ್ಪಣೆ ಪಡೆದು ಹೋಗಬಹುದೆಂದು ದೇವಸ್ಥಾನದ ಸಮಿತಿ ತೀರ್ಮಾನಿಸಿದೆ

●

ಮಗನ ಆತ್ಮಹತ್ಯೆ

ಟೋಕಿಯೋದಿಂದ ಬಂದಿರುವ ವಾರ್ತೆ ಇರುವುದು. ಒಬ್ಬ ತಂದೆ ತನ್ನ ಹಲವು ನೂರು ಮಿಲಿಯಗಟ್ಟಲೆ ಆಸ್ತಿಯನ್ನೆಲ್ಲ ತನ್ನ ಮಗನಿಗೆ ವರ್ಗಾಯಿಸುವುದಾಗಿ ತಿಳಿಸಿದಾಗ, ಆ ಮಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡನು

○

ವಿಶ್ವದಲ್ಲೇ ಅತಿ ಸೂರ್ಯತಾಪ

ಬಳ್ಳಾರಿ ಕಡಪ ಮತ್ತು ಕರ್ನೂಲ್ ಭಾಗವು ವಿಶ್ವದಲ್ಲೇ ಅತಿ ಸೂರ್ಯತಾಪದಿಂದ ಕೂಡಿದ ಪ್ರದೇಶವೆಂದು, ಸಹರಾ ಮರುಭೂಮಿಯಲ್ಲಿ ಸಹ ಇಷ್ಟು ಸೂರ್ಯತಾಪ ಇಲ್ಲವೆಂದು ನಿವೃತ್ತ ಆಬ್ಸರ್ವೇಟರಿ ಡೈರೆಕ್ಟರ್ ಜನರಲ್ ಶ್ರೀ ಪಿ. ಆರ್. ಕೃಷ್ಣರಾವ್‌ರವರು ಹೇಳಿರುವರು.

★

ಎತ್ತು ಸಾವಿರ ಇಸವಿಯಲ್ಲಿ ಪ್ರಪಂಚದಲ್ಲಿ ಪ್ರಳಯ ಆಗುವುದೆಂದು, ಕೋಟಿಗಟ್ಟಲೆ ಜನರು ನಾಶವಾಗುವರೆಂದು ಅಣುಶಕ್ತಿ ಆಯೋಗದ ಅಧ್ಯಕ್ಷ ಸರ್ ಫಿಲಿಪ್ ಬಾಕ್ಸೆಕ್ ಸಿಡ್ನಿಯಲ್ಲಿ ತಿಳಿಸಿದರು.

★

ಬಾಂಗ್ಲ ಭಾಗಿ

ಭಾರತ ಮತ್ತು ಪಾಕೀಸ್ತಾನಕ್ಕೆ ಆಗುವ ಯಾವುದೇ ಒಪ್ಪಂದಕ್ಕೂ ಬಾಂಗ್ಲ ದೇಶವು ಭಾಗಿ ಆಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತೆಂದು ನವ ದೆಹಲಿಯಿಂದ ಬಂದ ವಾರ್ತೆ ತಿಳಿಸುತ್ತದೆ

●

ಹದಿಮೂರು ಮಂದಿಗೆ ಗಾಯ

ಸಿಲಚಾರನಿಂದ ಬಂದಿರುವ ವರದಿ ಪ್ರಕಾರ ವಿದ್ಯಾರ್ಥಿಗಳು ಹಾಗೂ ಪೋಲೀಸರಲ್ಲಿ ಘರ್ಷಣೆ ನಡೆದು ಹದಿಮೂರು ಜನ ಗಾಯಗೊಂಡರು.

●

ರೈಲ್ವೆ ಅನಾಹುತ

ಬೆಂಗಳೂರು ಹುಬ್ಬಳ್ಳಿ ಪ್ರಯಾಣೀಕರ ರೈಲು ಬುಧವಾರ ಚಕರಲಾಪಳ್ಳಿ ಮತ್ತು ಹೆನುಗೊಂಡ ರೈಲ್ವೆ ನಿಲ್ದಾಣಗಳ ನಡುವೆ ಕಂಬಿ ತಪ್ಪಿ ಅನಾಹುತವಾಗಿ ಇಪ್ಪತ್ತೊಂದು ಜನರು ಸತ್ತು ನಲವತ್ತೊಂದು ಜನರು ಗಾಯಗೊಂಡರು.

○

ಭಾರತದಲ್ಲಿ ಹಾಲು ಉತ್ಪಾದನೆ

ನವದೆಹಲಿ— ಭಾರತದಲ್ಲಿ ವರ್ಷಕ್ಕೆ 21 ದಶಲಕ್ಷ ಟನ್ ಹಾಲನ್ನು ಉತ್ಪಾದಿಸಲಾಗುತ್ತಿದೆ ; ಇದರಿಂದ ಪ್ರತಿ ಭಾರತೀಯನಿಗೂ ದಿನಂಪ್ರತಿ 126 ಗ್ರಾಂ ಹಾಲು ದೊರಕಿದಂತಾಗುತ್ತಿದೆ ; ಇದು ಕನಿಷ್ಠ ಮಟ್ಟದ ಅಗತ್ಯಕ್ಕಿಂತ ಕಡಮೆ ಪ್ರಮಾಣದಲ್ಲಿದೆ.

ಪರಿಹಾರವೆಲ್ಲಿ ?

ಲೇಖಕರು :
ವಜ್ರಳ್ಳಿ ಗಣಪತಿ ಶರ್ಮಾ

ನಾವೀಗ ಎಷ್ಟೋ ದೂರ ಬಂದಿದ್ದೇವೆ. ಈ ಲೋಕದಲ್ಲಿ ಇನ್ನೂ ಬಹಳ ಕಾಲ ಬಾಳಿಯಲು ನಮಗೆ ಅಪೇಕ್ಷೆಯಿಲ್ಲ. ಜೀವನದ ಒಂದೊಂದು ಕ್ಷಣವೂ ಆದೇ ಮೊದಲು, ಆದೇ ಕೊನೆಯು ಭೆಟ್ಟಿಯಿತ್ತು ಎಲ್ಲೋ ಕತ್ತಲಲ್ಲಿ ಮರೆಯಾಗುತ್ತಿದೆ : ನಮ್ಮ ಅಂತಿಮ ಕ್ಷಣವೂ ನಮ್ಮ ಸ್ವಾಗತಕ್ಕೆ ಅನತಿ ದೂರದಲ್ಲೇ ಕಾದಿದೆ ; ಆದರೆ ನಾವು ಮಾತ್ರ ವಾಲ್ಮೀಕಿ ಮಹರ್ಷಿಗಳು ಉದ್ಗರಿಸಿದಂತೆ :

ನ್ಯವಂತ್ಯುದಿತ ಅದಿತ್ಯೇ ನಂದ್ಯತ್ಯಸ್ತಮಿತೇ ಶರ್ವೌ
ಆತ್ಮನೋ ನಾವಬುಧ್ಯಂತೇ ಮನುಷ್ಯಾಃ ಜೀವಿತ ಕ್ಷಯಂ ॥

(ಸೂರ್ಯೋದಯವಾಪೊಡನೆ, ಸೂರ್ಯಾಸ್ತವಾದೊಡನೆ ಜನ ಆನಂದಿತರಾಗುತ್ತಾರೆ ; ಆದರೆ ನಮ್ಮ ಜೀವಿತ ಕ್ಷಯವಾಗುತ್ತಿದೆ ಎಂಬುದನ್ನು ಮನುಷ್ಯರು ತಿಳಿಯುತ್ತಿಲ್ಲ)

ಈ ವಿಷಯದ ಸಂಚಲನೆಯಲ್ಲಿ ನಮ್ಮನ್ನೇ ನಾವು ಮರೆಯುತ್ತಿದ್ದೇವೆ : ಆದರೆ ನಾವು ಮಾಡಬೇಕಾದ ಕಾರ್ಯ ಒಹಳವಿದೆ : ಇದು ಇನ್ಯಾರ ಬಗ್ಗಾಗಿಯೂ ಅಲ್ಲ, ನಮ್ಮ ಬಗ್ಗಾಗಿಯೇ : ನಾವು ಮನುಷ್ಯರಾಗಿ ಹುಟ್ಟಿದ್ದಕ್ಕಾಗಿ, ನಮ್ಮತನ ಕಾದುಕೊಳ್ಳುವ ಬಗ್ಗಾಗಿ; ಆದ್ದರಿಂದ ಇರುವ ಸ್ವಲ್ಪೇ ಸಮಯದಲ್ಲಿ ನಮ್ಮೆಲ್ಲ ಶಕ್ತಿಯನ್ನೂ ಸಂಯೋಜಿಸಿ, ಇದ್ದಷ್ಟೇ ದಿವಸ ಸಾರ್ಥಕವಾದ ಬಾಳು ನಡೆಸುವ ನಿರ್ಧಾರವೊಂದೇ ನಮ್ಮಗಿರುವ ಒಂದೇಒಂದು ಸಫಲ ಮಾರ್ಗ.

Protect the Cow



Help The Gorakshana

— Humanitarian Propoganda Monthly ....

' ಮಾನವನು ಕೀಳು ಸೃಷ್ಟಿಯ ಋಣ, ತ್ರೈಷ್ಣವೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸ್ವದೇಶ ಹೊತ್ತ ಚಿತ್ರ ಸಂದೇಶ ಕವರ ಚೊಚ್ಚಲು ಚಿತ್ರ

ಆನೆ - ಹುಡುಗ

ವುಡ್‌ಲಾಂಡ್ 28-4-72 ರಿಂದ ಆವೋಫ 2ನೇ ವಾರ

ವರ್ಣರಂಜಿತ ಹಿಂದಿ ಚಿತ್ರ

ಮೇರೆ ಹಮ್‌ಸಫರ್

ಪಾತ್ರ : ಜಿತೇಂದ್ರ, ಶರ್ಮಿಳಾ ಟಾಗೂರ್, ಬಾಲರಾಜ ಸಹಾನಿ

ನಿರ್ದೇಶನ — ದುಲಾಲ್ ಗುಹ ಸಂಗೀತ — ಕಲ್ಯಾಣಜಿ ಆನಂದಜಿ

ಪ್ರತಿ ದಿನ 3 ಪ್ರದರ್ಶನಗಳು

ಜೆಳಗಿನ ಪ್ರದರ್ಶನ ಪ್ರತಿ ದಿನ 10-30 ನಂದಾದೀಪ

ಅಪೆರಾ 2 ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ — ನಿರ್ದೇಶನ : ಗೀತಪ್ರಿಯ

SHAKTI
SUDHA

A Superb Tonic

Contribute Liberally
to the National Defence Fund

Edited Printedand Published by Dharmapracharanirata
M S Krishna Rao (Propretor) at the Satvadi Press
Chamarajapuram Mysore 4

ಛತ್ರಿಗಳಿಗೆ - ಕೊಡೆಗಳಿಗೆ ಬ್ಯಾಂಕ್ ರೋಡ್ ಬಾಹುನಾರ್